ವಾಣಿಜ್ಯ ತೆರಿಗೆ ಇಲಾಖೆಯ 'ಸಿ' ಮತ್ತು 'ಡಿ' ದರ್ಜೆ ನೌಕರರ ಬೇಡಿಕೆ

284 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಣಿಜ್ಯ ತೆರಿಗೆ ಇಲಾಖಾ ಸಿ ಮತ್ತು ಡಿ ದರ್ಜೆ ನೌಕರರು ಬಹಳಷ್ಟು ವರ್ಷಗಳಿಂದ ಮುಂಬಡ್ತಿಗಾಗಿ ಮುಷ್ಕರಕ್ಕೆ ಕರೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದುವರೆವಿಗೂ ಯಾವುದೇ ಕ್ರಮ ತೆಗೆದುಕೊಳ್ಳದಿರಲು ಕಾರಣಗಳೇನು?

ಇ) ಈ ಮುಷ್ಕರದಿಂದ ಸರ್ಕಾರದ ಬೊಕ್ಕಸಕ್ಕೆ ಆದ ನಷ್ಟ ಏನು? ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :

ಅ) ವಾಣಿಜ್ಯ ತೆರಿಗೆ ಇಲಾಖೆ ಸಿ ಮತ್ತು ಡಿ ದರ್ಜೆ ನೌಕರರು ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ಮುಷ್ಕರಕ್ಕೆ ಕರೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇವರ ಬೇಡಿಕೆಗಳನ್ನು ಪರಿಶೀಲಿಸಲಾಗುತ್ತಿದೆ.

ಇ) ಉಂಟಾದ ನಷ್ಟವನ್ನು ಅಂದಾಜು ಮಾಡಿಲ್ಲ.

1994 ಡಿಸೆಂಬರ್‌ನಿಂದ 1996ರ ಜನವರಿಯವರೆಗೆ ಸಚಿವರುಗಳ ಪ್ರವಾಸದ ವೆಚ್ಚ

285 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994 ಡಿಸೆಂಬರ್ ತಿಂಗಳಿನಿಂದ 1996 ಜನವರಿ ತಿಂಗಳವರೆಗೆ ಸಚಿವರುಗಳಿಗೆ ತಗಲಿದ ಪ್ರವಾಸ ಭತ್ಯೆಯ ಬಿಲ್ಲುಗಳ ವೆಚ್ಚ ಎಷ್ಟು?

ಆ) ಪ್ರತಿಯೊಬ್ಬ ಸಚಿವರುಗಳ ಪ್ರವಾಸ ಭತ್ಯೆಯ ವೆಚ್ಚದ ವಿವರ ನೀಡುವುದು?

ಇ) ಇವುಗಳಲ್ಲಿ ಖಾಸಗಿಯಾಗಿ ಎಷ್ಟು? ಸರಕಾರಕ್ಕೆ ಆದ ವೆಚ್ಚದಲ್ಲಿ ಎಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ನೀಡಿರುವ ಮಾಹಿತಿಯನ್ನು ಸಚಿವರುಗಳ ಅಧಿಕೃತ ಪ್ರವಾಸಗಳಿಗೆ ಮಾತ್ರ ಸಂಬಂಧಿಸಿದ್ದಾಗಿದೆ.

ಅನುಬಂಧ

1994ನೇ ಡಿಸೆಂಬರ್‌ನಿಂದ 1996ನೇ ಜನವರಿಯವರೆಗೆ ಸಚಿವರುಗಳಿಗೆ ತಗುಲಿದ ಪ್ರವಾಸ ಭತ್ಯೆಯ ವೆಚ್ಚದ ವಿವರಗಳು

ಕ್ರ.ಸಂ.	ಹೆಸರು ಮತ್ತು ಪದನಾಮ	ಒಟ್ಟು ವೆಚ್ಚ ರೂ.
1	2	3
1.	ಶ್ರೀ ಹೆಚ್.ಡಿ. ದೇವೇಗೌಡ ಮುಖ್ಯಮಂತ್ರಿಗಳು	4,35,541-00
2.	ಶ್ರೀ ಜೆ.ಹೆಚ್. ಪಟೇಲ್ ಉಪಮುಖ್ಯಮಂತ್ರಿಗಳು	1,63,977-99
3.	ಶ್ರೀ ಆರ್. ಎಲ್. ಜಾಲಪ್ಪ ಕಂದಾಯ ಸಚಿವರು	1,32,930-00
4.	ಶ್ರೀ ಡಿ. ಮಂಜುನಾಥ್ ಉನ್ನತ ಶಿಕ್ಷಣ ಸಚಿವರು	3,14,774-00
5.	ಶ್ರೀ ಎಂ.ಪಿ. ಪ್ರಕಾಶ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು	2,21,971-00
6.	ಶ್ರೀ ಸಿದ್ಧರಾಮಯ್ಯ ಹಣಕಾಸು ಮತ್ತು ಯೋಜನಾ ಸಚಿವರು	5,23,570-00
7.	ಶ್ರೀ ಆರ್.ವಿ. ದೇಶಪಾಂಡೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು	5,54,973-00
8.	ಶ್ರೀ ಪಿ.ಜಿ.ಆರ್. ಸಿಂಧ್ಯಾ ಗೃಹ ಸಚಿವರು	2,18,679-00
9.	ಶ್ರೀ ವೈಜನಾಥ್ ಪಾಟೀಲ್ ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಅಭಿವೃದ್ಧಿ ಮಂಡಲಿ ಸಚಿವರು	4,26,626-00
10.	ಶ್ರೀ ಸಿ. ಬೈರೇಗೌಡ ಕೃಷಿ ಸಚಿವರು	4,66,494-00

1	2	3
11.	ಶ್ರೀ ಎಂ.ಸಿ. ನಾಣಯ್ಯ ವಾರ್ತಾ ಮತ್ತು ಪ್ರಸಾರ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು	3,42,502-00
12.	ಶ್ರೀ ಹೆಚ್.ಸಿ. ಗೋವಿಂದೇಗೌಡ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು	4,41,968-00
13.	ಶ್ರೀ ಶಿವಾನಂದ ಹೆಚ್. ಕೌಜಲಗಿ ಲೋಕೋಪಯೋಗಿ ಸಚಿವರು	4,63,033-00
14.	ಶ್ರೀ ರಮೇಶ್ ಸಿ. ಜಿಗಜಿಣಗಿ ಸಮಾಜ ಕಲ್ಯಾಣ ಸಚಿವರು	4,77,524-00
15.	ಶ್ರೀ ತಿಪ್ಪೇಸ್ವಾಮಿ ಅಬಕಾರಿ ಸಚಿವರು	4,60,026-00
16.	ಶ್ರೀ ಕೆ.ಎಸ್. ಬೀಳಗಿ ಸಾರಿಗೆ ಸಚಿವರು	3,52,196-00
17.	ಡಾ. ಹೆಚ್.ಸಿ. ಮಹದೇವಪ್ಪ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು	3,91,768-00
18.	ಶ್ರೀ ಎಸ್. ಎಂ. ನಬಿ. ಸಣ್ಣ ಕೈಗಾರಿಕೆ ಸಚಿವರು	2,05,760-00
19.	ಶ್ರೀ ಎಸ್.ಎಸ್. ಪಾಟೀಲ್ ಸಹಕಾರ ಸಚಿವರು	4,38,152-00
20.	ಶ್ರೀ ಎಸ್.ನಂಜಪ್ಪ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು	3,47,021-00
21.	ಶ್ರೀ ಹೆಚ್.ವೈ. ಮೇಟಿ ಅರಣ್ಯ ಸಚಿವರು	4,32,492-00
22.	ಶ್ರೀ ಎಸ್.ಡಿ. ಜಯರಾಂ ಗಣಿ ಮತ್ತು ಭೂವಿಜ್ಞಾನ ಸಚಿವರು	3,71,621-00

1	2	3
23.	ಶ್ರೀ ಸಿ. ಗುರುನಾಥ್ ಕಾರ್ಮಿಕ ಸಚಿವರು	4,58,680-00
24.	ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಸಣ್ಣ ನೀರಾವರಿ ರಾಜ್ಯ ಸಚಿವರು	3,16,092-000
25.	ಶ್ರೀ ಆರ್. ರೋಷನ್ ಬೇಗ್ ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು	3,86,278-00
26.	ಶ್ರೀ ಬಿ.ಬಿ. ನಿಂಗಯ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು	4,52,099-00
27.	ಶ್ರೀ ಬಿ.ಎನ್. ಬಚ್ಚೇಗೌಡ ಪಶುಸಂಗೋಪನೆ ರಾಜ್ಯ ಸಚಿವರು	6,77,802-00
28.	ಶ್ರೀ ಡಿ. ನಾಗರಾಜಯ್ಯ ರೇಷ್ಮೆ ರಾಜ್ಯ ಸಚಿವರು	3,59,436-00
29.	ಶ್ರೀ ಡಿ.ಟಿ. ಜಯಕುಮಾರ್ ತೋಟಗಾರಿಕೆ ರಾಜ್ಯ ಸಚಿವರು	4,76,289-00
30.	ಶ್ರೀ ಪಿ.ಸಿ. ಸಿದ್ದನಗೌಡರ್ ಸಕ್ಕರೆ, ಜವಳಿ, ವಿಜ್ಞಾನ ಮತ್ತು ಪರಿಸರ ರಾಜ್ಯ ಸಚಿವರು	4,50,768-00
31.	ಶ್ರೀ ಬಸವರಾಜ ರಾಯರೆಡ್ಡಿ ವಸತಿ ರಾಜ್ಯ ಸಚಿವರು	3,81,848-00
32.	ಶ್ರೀಮತಿ ಬಿ.ಟಿ. ಲಲಿತಾನಾಯಕ್ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು (ಮಾಜಿ)	3,58,998-00
33.	ಶ್ರೀ ಎ.ಬಿ. ಪಾಟೀಲ್ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು	3,80,771-00
34.	ಶ್ರೀ ಅಜಯಕುಮಾರ್ ಸರ್ ನಾಯಕ್ ಯುವಜನ ಸೇವೆ ಮತ್ತು ಕ್ರೀಡೆ ರಾಜ್ಯ ಸಚಿವರು	6,12,689-00
35.	ಶ್ರೀ ಮುನಿಯಪ್ಪ ಮುದ್ದಪ್ಪ ಬೃಹತ್ ನೀರಾವರಿ ರಾಜ್ಯ ಸಚಿವರು	3,35,437-00

1	2	3
36.	ಶ್ರೀ ವಿರಾಜುದ್ದೀನ್ ಎನ್. ಪಟೇಲ್ ಬಂದಿಖಾನೆ, ಗೃಹರಕ್ಷಕ ದಳ ರಾಜ್ಯ ಸಚಿವರು (ಮಾಜಿ)	3,46,311-00
37.	ಶ್ರೀ ಕೆ. ಜಯಪ್ರಕಾಶ್ ಹೆಗಡೆ ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು	5,45,847-00
	ಒಟ್ಟು	**1,47,23,143-00**

ರಾಜ್ಯದಲ್ಲಿ ಪಾನ ನಿಷೇಧದ ಬಗ್ಗೆ

286 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1996-97ನೇ ಸಾಲಿನಿಂದ ರಾಜ್ಯದಲ್ಲಿ ಪಾನ ನಿಷೇಧವನ್ನು ಜಾರಿಗೊಳಿಸಲು ಸರ್ಕಾರದವರು ಪರಿಶೀಲಿಸುವರೆ?

ಆ) ಹಾಗಿದ್ದಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳು ಪಾನ ನಿಷೇಧವನ್ನು ಜಾರಿಗೊಳಿಸಲು ಶಿಫಾರಸ್ಸು ಮಾಡಿವೆ? (ಆ ಗ್ರಾಮ ಪಂಚಾಯಿತಿಗಳು ಯಾವುವು)

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ರಾಜ್ಯದಲ್ಲಿ ಪಾನ ನಿರೋಧವನ್ನು ಪುನಃ ಜಾರಿಗೊಳಿಸಲು ಸರ್ಕಾರ ಗಂಭೀರವಾಗಿ ಆಲೋಚಿಸುತ್ತಿದೆ. ಈ ಬಗ್ಗೆ ಅಂತಿಮವಾಗಿ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ.

ಆ) 118 ಗ್ರಾಮ ಪಂಚಾಯಿತಿಗಳು ಮದ್ಯಮುಕ್ತ ಗ್ರಾಮಗಳನ್ನಾಗಿಸಲು ನಿರ್ಣಯ ತೆಗೆದುಕೊಂಡಿವೆ. (ಗ್ರಾಮ ಪಂಚಾಯಿತಿಗಳ ವಿವರ ಅನುಬಂಧದಲ್ಲಿದೆ)